**ವ್ಯಾಖ್ಯಾನ**

# ಕಾಗದ ಬಂದಿದೆ ನಮ್ಮ ಕಮಲನಾಭನದು

ಕೀರ್ತನೆಯ ಚಿಂತನೆ:

**ಕಾಗದ ಬಂದಿದೆ ನಮ್ಮ ಕಮಲನಾಭನದು, ಈ**
**ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೊ || ಪ ||**

**ಕಾಮ ಕ್ರೋಧವ ಬಿಡಿರೆಂಬೊ ಕಾಗದ ಬಂದಿದೆ**
**ನೇಮ ನಿಷ್ಠೆಯೊಳಿರಿರೆಂಬೊ ಕಾಗದ ಬಂದಿದೆ**
**ತಾಮಸ ಜನರ ಕೂಡದಿರೆಂಬೋ ಕಾಗದ ಬಂದಿದೆ, ನಮ್ಮ**
**ಕಾಮನಯ್ಯನು ತಾನೆ ಬರೆದ ಕಾಗದ ಬಂದಿದೆ || 1 ||**

**ಹೆಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ**
**ಹೊನ್ನಿನಾಸೆ ಬಿಡಿರೆಂಬೊ ಕಾಗದ ಬಂದಿದೆ**
**ಮಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ, ನಮ್ಮ**
**ಕಮಲನಾಭನು ತಾನೆ ಬರೆದ ಕಾಗದ ಬಂದಿದೆ || 2 ||**

**ಗೆಜ್ಜೆ ಕಾಲ್ಕಟ್ಟಿರೆಂಬೊ ಕಾಗದ ಬಂದಿದೆ**
**ಹೆಜ್ಜೆ ಹೆಜ್ಜೆಗೆ ಹರಿಯೆನ್ನಿರೆಂಬೊ ಕಾಗದ ಬಂದಿದೆ**
**ಲಜ್ಜೆ ಬಿಟ್ಟು ಕುಣಿಯಿರೆಂಬೊ ಕಾಗದ ಬಂದಿದೆ, ನಮ್ಮ**
**ಪುರಂದರ ವಿಠ್ಠಲ ತಾನೆ ಬರೆದ ಕಾಗದ ಬಂದಿದೆ || 3 ||**

ಅದು ಸುವರ್ಣ ಯುಗ. ಯತಿಕುಲ ತಿಲಕ ಶ್ರೀ ವ್ಯಾಸರಾಜರು.. ವ್ಯಾಸ ಸಾಹಿತ್ಯ ನಿಷ್ಣಾತರು. ದಾಸ ಸಾಹಿತ್ಯ ನಿರ್ಮಾಪಕರು. ರಾಜರ ಶಿಷ್ಯರು ಪುರಂದರ ದಾಸರು. ಜ್ಞಾನಿವರೇಣ್ಯ ಪುರುಂದರ ದಾಸರು. ದೇವ ವಿಠ್ಠಲನ ಜೊತೆಗೆ ಭಕ್ತಿಯ ಸಲುಗೆ. ಕಾಡಿ, ಬೇಡಿ, ಮಾತನಾಡಿ, ಹಾಡಿ, ಪಾಡಿ, ಕುಣಿ ಕುಣಿದಾಡಿ ಆನಂದ ಈಡಾಡಿ, ಸೂರೆಮಾಡಿ, ಓಡಾಡುವ ಜ್ಞಾನಮೂರ್ತಿ ದಾಸರು.

ಅಂದು, ಒಂದು ಶುಭ ಮುಂಜಾವು. ದಾಸರು ಜಗದೊಡೆಯನ ಚಿಂತನದಲ್ಲಿ ಮಗ್ನರು.

ಸರ್ವಮೂಲ ಗ್ರಂಥ. ಅವುಗಳಿಗೆ ಮೂಲ ಭಗವಾನ್ ವೇದವ್ಯಾಸರ ಸೂತ್ರ, ಇತಿಹಾಸ, ಪುರಾಣಾದಿ ಸಕಲ ಶಾಸ್ತ್ರ ವಾಂಗ್ಮಯ.

**'ಸರ್ವಂ ವ್ಯಾಸೋಚ್ಚಿಷ್ಟಂ'** - ಪ್ರಸಿದ್ಧ ಮಾತು.

ವ್ಯಾಸಕೃತವಲ್ಲದ ಅಧ್ಯಾತ್ಮವಿಲ್ಲ. ಎಲ್ಲವನ್ನೂ ಬರೆದಿದ್ದಾರೆ. ಬರೆದ ಕಾಗದವನ್ನು ಭಾಗವತರಿಗೆ ಕಳಿಸಿದ್ದಾರೆ! ದಾಸರ ಮನದಲ್ಲಿ ಈ ವಿಚಾರ ಮಿಂಚಿತು.
ವೇದವ್ಯಾಸರನ್ನು ವರದ ವಿಠ್ಠಲನಲ್ಲಿ ಕಂಡರು. ಭಕ್ತಿ ತುಂಬಿತು. ಅಂತಃಕರಣದ ಆಳದಿಂದ ಹಾಡಿದರು -
**'ಕಾಗದ ಬಂದಿದೆ ---- '**

ಈ ದೇವರನಾಮದ, ಮೇಲೆ ತೋರುವ ಅರ್ಥ -
'ನಮ್ಮ ದೇವರಿಂದ ಒಂದು ಕಾಗದ ಬಂದಿದೆ. ಸ್ವತಃ ಅವನೇ ಬರೆದಿದ್ದು. ಏನೆಂದು? -
ಕಾಮ, ಕ್ರೋಧಾದಿ ದುರ್ಗುಣ ಬಿಡಿ. ಪರ ಹೆಣ್ಣು, ಹೊನ್ನು, ಮಣ್ಣಿನ ಆಶೆ ಬೇಡ. ದುಷ್ಟರಿಂದ ದೂರ. ಭಕ್ತಿಯಿಂದ ದೇವರನ್ನು ಹಾಡಿ ಕೊಂಡಾಡಿ ನರ್ತಿಸಿ ಸೇವಿಸಿ. ಈ ರೀತಿ ಮಾಡಿರೆಂದು ಪರಮಾತ್ಮ ಬರೆದು ಕಳುಹಿಸಿದ್ದಾನೆ.' ಇದು ತೋರುವ ಅರ್ಥ.

ಇಷ್ಟಕ್ಕೇ ಮುಗಿಯಿತೋ? ಮತ್ತಷ್ಟು ಇದೆಯೋ? ದಾಸರ ಮಾತುಗಳು ಅವು. ಅಗೆದಷ್ಟೂ ಆಳ. ಜಗಿದಷ್ಟೂ ಸವಿ ಸವಿ. ಕಾಲವ ಕಳೆಯಿರಿ - ನೀವು ಏನೇ ಮಾಡಿ. ಕಾಲ ಕಳೆದು ಹೋಗುತ್ತೆ.
ಮುಳುಗುವ ಸೂರ್ಯ, ಮೂಡುವ ಚಂದ್ರ, ಕಾಲ ಕಿತ್ತುಕೊಂಡೇ ಹೋಗುತ್ತಾರೆ. ಕಾಲವೂ ಅಷ್ಟೇ. ತನ್ನನ್ನು ತಾನೇ ನಿಮ್ಮಿಂದ ಕಸಿದು ಕೊಳ್ಳುತ್ತದೆ. ಕಾಲ ಅಮೂಲ್ಯ. ವ್ಯರ್ಥ ಕಾಲ ಹೋಗುವದು ಬೇಡ. ಸತ್ಕಾಲಕ್ಷೇಪ ಮಾಡಿ. ಇದು ದಾಸರ ಕಳಕಳಿ.
ಏನು ಸತ್ಕಾಲಕ್ಷೇಪ?
ದೇವರು ತಾನೇ ಬರೆದ, ನಮಗಾಗಿ ಬರೆದ, ಅಂಥ ಕಾಗದ ಓದಿ. ಭಗವಾನ್ ವೇದವ್ಯಾಸರು ರಚಿಸಿದ ಗ್ರಂಥ ಅಧ್ಯಯನ. ಸತ್ ಸಂಗ. ಜಿಜ್ಞಾಸೆ. ಇದೇ ಸತ್ಕಾಲಕ್ಷೇಪ. ಬಾದರಾಯಣರ ಗ್ರಂಥ ಬಹು ಕಠಿಣ. ಎನ್ನಬೇಡಿ.
ಪತ್ರ ಬಂದಿದೆ. ಅನಕ್ಷರಸ್ಥನಿಗೆ ತಿಳಿಯಲಿಲ್ಲ. ಅಕ್ಷರಸ್ಥನಿಂದ ಓದಿಸಿ ತಿಳಿದುಕೊಂಡ. ಅಂತಿದೆ.
ಮಹಾನ್ ಅಕ್ಷರಸ್ಥ ಶ್ರೀಮನ್ ಮಧ್ವಾಚಾರ್ಯರು.
ವ್ಯಾಸರ ಗ್ರಂಥಗಳಿಗೆ ಸವಿಶೇಷ ಅರ್ಥ ಬರೆದ, ಈಶ ವ್ಯಾಸರ, ಪ್ರೀತಿಯ ದಾಸರು.
ಸರ್ವಮೂಲವೆಂಬ ಸುವರ್ಣ ಪತ್ರ ಭಂಡಾರ ಇಟ್ಟಿದ್ದಾರೆ. ಈ ಕೋಶ ಓದಿ. ಸರ್ವಸ್ವ ತಿಳಿ.

ಕಾಗದ ಸರಿ. ಯಾರದು? ಕಮಲನಾಭನದು. ಯಾರು ಕಮಲನಾಭ? ನಾಭಿಯಲ್ಲಿ ಕಮಲ ಇರುವವ = ವಿಷ್ಣು. ನಾಭಿಯಲ್ಲಿ ಕಮಲ ಏಕೆ ಬಂತು? ಹೇಗೆ ಬಂತು?
ಬ್ರಹ್ಮಾಂಡ ಸೃಷ್ಟಿಯ ಆದಿಯಲ್ಲಿ - ವಿಷ್ಣು ತನ್ನ ನಾಭಿಯಲ್ಲಿ ಕಮಲ ಸೃಷ್ಟಿಸಿದ. ಕಮಲದಲ್ಲಿ ಬ್ರಹ್ಮನನ್ನು ಸೃಷ್ಟಿಸಿದ. ಬ್ರಹ್ಮನಿಂದ ಬ್ರಹ್ಮಾಂಡ ಸೃಷ್ಟಿಸಿದ. ತಾನು ಸೃಷ್ಟಿ ಕರ್ತಾ ಎಂದು ತೋರಿಸಿದ.

ಜೊತೆಗೆ ಲಕ್ಷಣತಯಾ ಸೃಷ್ಟಿ, ಸ್ಥಿತಿ, ಲಯಾದಿ ಅಷ್ಟ ಕರ್ತತ್ವ ಪರಮಾತ್ಮನಿಗುಂಟು. 'ಕಮಲನಾಭ' ಪದ ಪ್ರಯೋಗದ ಹಿಂದೆ ದಾಸರ ಆಶಯ ಇದು.

ಇಂಥ ಸೃಷ್ಟಿ ಕರ್ತಾ, ನಮ್ಮ ಸ್ವಾಮಿ, ತಾನೇ ಸ್ವತಃ ಬರೆದ ಪತ್ರ ಬಂದಿದೆ. ಹೀಗೀಗೆ ಮಾಡಿ. ನಿಮಗೆ ಶ್ರೇಯಸ್ಸು ಎಂದು. 'ಹಾಗ ಹಾಗೆ ಮಾಡೋಣ ಬನ್ನಿ ಭಾಗವತರೇ' ಎಂದು ಆಮಂತ್ರಿಸುತ್ತಾರೆ ದಾಸರು.

ಕಾಮ, ಕ್ರೋಧ, ಮದ, ಮತ್ಸರ ಮೊದಲಾದ ತಾಮಸ ಗುಣಗಳ ಬಿಡಿ.

ಯಾಕೆ? ಇವು ಸಾಧನೆಗೆ ಬಾಧಕ. ವ್ರತ, ನಿಯಮ, ಸಹನೆ, ಶಾಂತಿ, ದಯೆ ಮೊದಲಾದ ಸದ್ಗುಣಗಳ ಹಿಡಿ. ಇವು ಸಾಧನೆಗೆ ಸೋಪಾನ. ಕಾಮಾದಿ ಬಿಡುವದು ಸಮಸ್ಯೆ, ಕಠಿಣ ಅನ್ನಬೇಡಿ. ಯಾಕೆ?

ಕಾಮನ ಅಪ್ಪನೇ ಬರೆದ ಕಾಗದವಿದು. ಅಪ್ಪ ಹೇಳುತ್ತಾನೆ. ಮಗ ಕೇಳುತ್ತಾನೆ.

ನಾವು ಅಪ್ಪ, ನಮ್ಮ ಜಗದಪ್ಪ ಹೇಳಿದ ಮಾತು ಕೇಳಿದರಾಯ್ತು. ಸುಲಭನೋ ಹರಿ.

ಪರ ಹೆಣ್ಣು, ಹೊನ್ನಿನ ಆಶೆ ಬೇಡ. ಮಣ್ಣಿನ ಆಶೆ ಮೊದಲೇ ಬೇಡ. ಯಾಕೆ?

ಹಿಂದೆ ಪರರ ಸೊತ್ತು ಬಯಸಿದವರೆಲ್ಲ ಸರ್ವನಾಶ ಹೊಂದಿದರಲ್ಲ! ಸೀತೆಯ ಕದ್ದ ರಾವಣ ಏನಾದ? ರಾಮ ಬಾಣಕ್ಕೆ ಈಡಾದ. ಕುಲದ ಕುರುಹಿಲ್ಲದಂತೆ ನಾಶವಾದ.

ಕೌರವರು ಏನಾದರು? ದುರ್ಯೋಧನನ ಹಣೆ ಬರಹವೇನಾಯ್ತು? ಕಾಮ, ಕ್ರೋಧ, ಮತ್ಸರದ ಮೂರ್ತಿ ಆತ. ಪರ ರಾಜ್ಯದ ಆಶೆ. ಮಣ್ಣಿನ ಆಶೆ. ಸಂಪತ್ತಿನ ಮೋಹ. ಪರ ಸ್ತ್ರೀ ದ್ರೌಪದಿಯ ವ್ಯಾಮೋಹ. ಸ್ವಕುಲಕ್ಕೆ ಕೊಡಲಿಯಾದ. ತನ್ನ ಕುಲ ನಾಶ ಕಂಡ. ಭೀಮನ ಗದೆಯ ರುಚಿ ಉಂಡ. ತೊಡೆ ಮುರಿಸಿ ಕೊಂಡ. ದುರ್ಗತಿ ಕಂಡ. ಕುರುಕ್ಷೇತ್ರದಲ್ಲಿ ಅನಾಥನಾಗಿ ಬಿದ್ದ.

ಗೆಜ್ಜೆ ಕಟ್ಟಿ. ಹೆಜ್ಜೆ ಹಾಕಿ. ಕೀರ್ತನ ಮಾಡಿ. ನರ್ತನ ಮಾಡಿ. ಗಾನಲೋಲನ ಸೇವಿಸಿ.

ಗೆಜ್ಜೆ ಯಾಕೆ?

ಗೆಜ್ಜೆ ನಾದ ಸನಾದ. ನಾದ ಎಂದರೆ ಶಬ್ದ. ಶಬ್ದರಾಶಿಯೇ ವೇದ. ಸನಾದ ಎಂದರೆ ನಾದ ಸಹಿತ. ಅರ್ಥಾತ್ ವೇದ ಸಹಿತ. ಅಂದರೆ ವೇದೋಕ್ತವಾಗಿ ಸ್ತುತಿಸಿ ಆರಾಧಿಸಿ ವೇದಗಮ್ಯನನ್ನು. ವೇದ ಅಂದರೆ ಜ್ಞಾನ. ವೇದ ಸಹಿತ ಎಂದರೆ ಜ್ಞಾನ ಸಹಿತ ದೇವರನ್ನು ಆರಾಧಿಸಿ. ಒಣ ಬಾಹ್ಯಾಡಂಬರ ಬೇಡ. ಜ್ಞಾನದ ಹೂರಣ ಒಳಗಿರಲಿ. ತುಂಬಿರಲಿ. ಮತ್ತೆ ಕೀರ್ತನ, ನರ್ತನ ಇವು

ಶ್ರವಣವೇ ಮೊದಲಾದ ನವವಿಧ ಭಕ್ತಿಯ ಅಂಗ. ಅರ್ಥ ನವವಿಧ ಭಕ್ತಿ ಮಾಡಿ. ಒಟ್ಟು ದೇವರಲ್ಲಿ ಜ್ಞಾನ, ಭಕ್ತಿ ಮುಖ್ಯ. ಲಜ್ಜೆ ಬಿಡಿರಿ. ಕುಣಿಯಿರಿ. ಎಂದು ಬರೆದಾನೆ ನಮ್ಮ ಸ್ವಾಮಿ. ಧರ್ಮಾಚರಣೆಗೆ ಹಿಂಜರಿಕೆ ಬೇಡ. ಕೀಳರಿಮೆ ಬೇಡ. ಇತರತ್ರ ವಿರಕ್ತಿ. ದೇವರಲ್ಲಿ ಆಸಕ್ತಿ. ಜ್ಞಾನ, ಭಕ್ತಿ ಪ್ರವಾಹ. ಭಗವನ್ನಿಷ್ಠೆಯ ಪ್ರಭಾವ. ಕೃಷ್ಣನ ಚರಣಕಮಲಗಳಲಿ ತನ್ಮಯತೆ. ಭಕ್ತಿಲಿ ಮೈಮರೆತೆ. ಗೋಕುಲದಲಿ ನಿಂತೆ. ಬಾಲಕೃಷ್ಣನ ಜೊತೆ. ಇಂತಿರಲು ಯಾರದೇಕೆ ಚಿಂತೆ? ಲಜ್ಜೆ ಬಿಡಿರಿ. ಹರಿಯ ಸ್ಮರಿಸಿ.

ಯಾಕೆ?

ನಲಿದರೆ ಒಲಿವ ಹರಿ. ಮತ್ತೆ ಹೆಜ್ಜೆ ಹೆಜ್ಜೆಗೆ ಹರಿ. ಎಂದು ಕೂಗಿ. ಗಟ್ಟಿಯಾಗಿ ಕೂಗಿ.

ಯಾಕೆ?

ಒಂದೇ ಕೂಗಳತೆ ವೈಕುಂಠ. ಕೂಗಿ ಕರೆದರೆ ಓಡಿ ಬರುವ. ರಕ್ಷಿಸುವ. ಕೈ ಹಿಡಿದು ತನ್ನ ಅರಮನೆಗೆ ಕರೆದೊಯ್ಯುವ.

ಏನು ಮಾಡಿದಳು ದ್ರೌಪದಿ?
'ಕೃಷ್ಣಾ' ಎಂದು ಕೂಗಿ ಕರೆದಳು. ಓಡೋಡಿ ಬಂದ. ವಸ್ತ್ರವಿತ್ತ. ಅಕ್ಷಯ ಅಂದ. ಮಾನಿನಿಯ ಮಾನವ ಕಾಯ್ದ.

ಗಜರಾಜ ಏನೆಂದ?
'ದಯಾನಿಧೇ' ಎಂದ. ಕೂಗಿ ಕರೆದ. ಶ್ರೀ ಮನ್ನಾರಾಯಣ ಪ್ರತ್ಯಕ್ಷ. ಮಕರವ ಸೀಳಿದ. ಕರಿಯ ರಕ್ಷಿಸಿದ. ಹಸ್ತೀವರದ ನಾರಾಯಣನಾದ.

ಅಪ್ಪ ಪುರುಂದರ ವಿಠ್ಠಲ ತಾನೇ ವೇದವ್ಯಾಸ ರೂಪದಿ ಸ್ವತಃ ಬರೆದ ಕಾಗದ - ಗ್ರಂಥಗಳಿವೆ.
ಸರಿ 'ಕಾಗದ' ಓದಿದೆವು. ಏನು ಫಲ?
ಕಾಗದ ಶಬ್ದವೇ ಉತ್ತರಿಸುತ್ತದೆ.

**ಕಾಗದ** = ಕ+ಅ+ಗ+ದ

**'ಕ'** ಎಂದರೆ ಪರಮಾತ್ಮ (ಕ - ಏಕಾಕ್ಷರ ಪರಮಾತ್ಮ)

**'ಅ' -** ಅಕಾರ ವಾಚ್ಯ ಪರಮಾತ್ಮ.

**'ಗ'** = ಗತಿ, ಸದ್ಗತಿ.

**'ದ'** = ದದಾತಿ, ಕೊಡು

**ಕಾಗದ = ಪರಮಾತ್ಮ ಸದ್ಗತಿ ಕೊಡುತ್ತಾನೆ.**
ಈ ಕಾಗದ ಓದಿದಾಗ ಜ್ಞಾನ, ಭಕ್ತಿ, ವಿರಕ್ತಿ ಗಳ ಪ್ರಾಪ್ತಿ. ಅದುವೇ ಪರಮ ಪುರುಷಾರ್ಥ ಮೋಕ್ಷಕ್ಕೆ ಸೋಪಾನ.

ದಾಸರ ಅಂತರ್ಗತ ಮುಖ್ಯ ಪ್ರಾಣಾಂತರ್ಗತ ವಿಠ್ಠಲ ದೇವರಿಗೆ ಶಿ ಸಾ ನಮಿಸೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ